ಇಲಾಖೆಯವರು ನನಗೆ ಮಾಹಿತಿ ನೀಡಿದ್ದಾರೆ. ಏನಾದರೂ ವಿದ್ಯುತ್‌ಚ್ಛಕ್ತಿ ಬಿಲ್ಲನ್ನು ಸ್ಲಂಬೋರ್ಡಿನವರು ಕಟ್ಟಿಲ್ಲವೆಂದರೆ ಆ ಹಣವನ್ನು ಕೆಇಬಿಗೆ ಸಮಯಕ್ಕೆ ಸರಿಯಾಗಿ ಕಟ್ಟುವುದಕ್ಕೆ ಹೇಳುತ್ತೇನೆ, ಮತ್ತು ಯಾವುದೇ ರೀತಿಯಲ್ಲೂ ವಿದ್ಯುತ್ ಸರಬರಾಜನ್ನು ನಿಲ್ಲಿಸದಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡುತ್ತೇನೆ.

ವಿಷಯ: ಆಶ್ರಯ ಯೋಜನೆ.

258 (1722)

ಶ್ರೀ ಪ್ರಕಾಶ ಬಿ.ಹುಕ್ಕೇರಿ (ಸದಲಗಾ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆ ದಯವಿಟ್ಟು ಉತ್ತರಿಸುವರೆ?

ಅ) ಸದಲಗಾ ಕ್ಷೇತ್ರದಲ್ಲಿ ಆಶ್ರಯ ಯೋಜನೆಯಡಿ ಕಳೆದ ಮೂರು ವರ್ಷಗಳಲ್ಲಿ (1995-96 1996-97 ಮತ್ತು 1997-98) ಹಂಚಿಕೆ ಮಾಡಲಾದ ಮನೆಗಳ ಸಂಖ್ಯೆ ಎಷ್ಟು?

ಆ) ಅ ಪೈಕಿ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗಕ್ಕೆ ಸೇರಿದವರ ಸಂಖ್ಯೆ ಎಷ್ಟು? (ವಿವರಗಳನ್ನೊದಗಿಸುವುದು)

ಇ) ಈ ಯೋಜನೆಯಡಿ ಮನೆ ನೀಡಲು ಅನುಸರಿಸಬೇಕಾದ ನಿಯಮಗಳೇನು?

ಈ) ಈ ಯೋಜನೆಗಾಗಿ ಕಳೆದ ಮೂರು ವರ್ಷಗಳಿಂದ ಬಿಡುಗಡೆಯಾದ ಹಣವೆಷ್ಟು?

ಶ್ರೀ ಹೆಚ್.ಡಿ.ರೇವಣ್ಣ (ವಸತಿ ಸಚಿವರು):

ಅ) ಸದಲಗಾ ವಿಧಾನಸಭಾ ಕ್ಷೇತ್ರದಲ್ಲಿ ಕಳೆದ ಮೂರು ವರ್ಷಗಳಲ್ಲಿ ಹಂಚಿಕೆ ಮಾಡಿರುವ ಮನೆಗಳ ಸಂಖ್ಯೆ ಈ ಕೆಳಗಿನಂತೆ ಇರುತ್ತದೆ.

ಕ್ರ ಸಂ.	ವರ್ಷ	ಹಂಚಿಕೆ ಮಾಡಲಾದ ಮನೆಗಳ ಸಂಖ್ಯೆ
1.	1995-96	200
2.	1996-97	50
3.	1997-98	221

ಆ) ಪರಿಶಿಷ್ಟ ಜಾತಿಯವರಿಗೆ ಒಟ್ಟು 86 ಮನೆಗಳನ್ನು ಹಾಗೂ ಪರಿಶಿಷ್ಟ ವರ್ಗದವರಿಗೆ 8 ಮನೆಗಳನ್ನು ನೀಡಲಾಗಿದೆ. ವರ್ಷಾವಾರು ವಿವರ ಕೆಳಕಂಡಂತಿದೆ.

ಕ್ರ ಸಂ	ವರ್ಷ	ಪರಿಶಿಷ್ಟ ಜಾತಿ	ಪರಿಶಿಷ್ಟ ಪಂಗಡ
1.	1995-96	29	04
	1996-97	02	01
	1997-98	55	03

ಇ) ಈ ಯೋಜನೆಯಲ್ಲಿ ಯೋಜನೆ ಮಾರ್ಗಸೂಚಿ ಆದೇಶಗಳ ಪ್ರಕಾರ ಮನೆ ನೀಡಲು ಫಲಾನುಭವಿಗಳಿಗೆ ಜೂನ್ 1995ರಲ್ಲಿ ನಡೆಸಿದ ವಸತಿ ರಹಿತ: ನಿವೇಶನ ರಹಿತರ ಪಟ್ಟಿಯನ್ನು ಆಧರಿಸಿ ಅದರಲ್ಲಿರುವವರನ್ನು ಗ್ರಾಮ ಸಭೆಯಲ್ಲಿ ಆಯ್ಕೆ ಮಾಡಿದ ನಂತರ ಸದರಿ ಯಾದಿಯಿಂದ ಆಶ್ರಯ ಸಮಿತಿಗಳು ಫಲಾನುಭವಿಗಳನ್ನು ಆಯ್ಕೆ ಮಾಡಿ ಮನೆಗಳನ್ನು ಹಂಚಿಕೆ ಮಾಡುವುದು ಮತ್ತು ಫಲಾನುಭವಿಗಳ ಆಯ್ಕೆ ಮಾಡುವ ಕಾಲಕ್ಕೆ ಪರಿಶಿಷ್ಟ ಜಾತಿ ಫಲಾನುಭವಿಗಳಿಗೆ ಶೇಕಡಾ 25, ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಶೇ 5, ಹಿಂದುಳಿದ ವರ್ಗದ ಫಲಾನುಭವಿಗಳಿಗೆ ಶೇಕಡಾ 15 ಮತ್ತು ಅಲ್ಪಸಂಖ್ಯಾತರ ವರ್ಗದ ಫಲಾನುಭವಿ ಶೇ 4 ಮತ್ತು ಶೇ 3ನ್ನು ಅಂಗವಿಕಲರಿಗೆ ಹಾಗೂ ಎಲ್ಲಾ ವರ್ಗದಲ್ಲಿ ಮಹಿಳೆಯರಿಗೆ ಶೇ 33 ರಷ್ಟು ಮೀಸಲಾತಿಯನ್ನು ಪಾಲಿಸಬೇಕು.

ಈ) ಕಳೆದ ಮೂರು ವರ್ಷಗಳಿಂದ ಸದಲಗಾ ಕ್ಷೇತ್ರಕ್ಕೆ ಬಿಡುಗಡೆ ಮಾಡಿದ ಹಣ

ಕ್ರಸಂ	ವರ್ಷ	ಬಿಡುಗಡೆ ಮಾಡಿದ ಹಣ (ರೂ.ಲಕ್ಷಗಳಲ್ಲಿ)
1.	1995-96	30.550
2.	1996-97	86.346
3.	1997-98	67.069

ಶ್ರೀ ಪ್ರಕಾಶ್ ಬಿ.ಹುಕ್ಕೇರಿ: 1995-96 ಮತ್ತು 96-97ರಲ್ಲಿ ಎಲ್ಲಾ ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದೆ. ಆದರೆ 1995ರಲ್ಲಿ 45 ಮನೆಗಳು ಅಪೂರ್ಣವಾಗಿವೆ. 1996ರಲ್ಲಿ 18 ಮನೆಗಳು ಅಪೂರ್ಣವಾಗಿವೆ. 1997ರಲ್ಲಿ ಆಶ್ರಯ ಯೋಜನೆ ಅಡಿಯಲ್ಲಿ ಒಂದು ಮನೆಯ ಕಟ್ಟಡ ಕೂಡ ಪ್ರಾರಂಭವಾಗಿಲ್ಲ. ನಾವು ಅಧಿಕಾರಿಗಳನ್ನು ಕೇಳಿದರೆ ಹಣ ಬಿಡುಗಡೆ ಆಗಿಲ್ಲ, ಹಣ ಬಿಡುಗಡೆಯಾದ ಮೇಲೆ

ಕಟ್ಟಡ ಕಟ್ಟಲಿಕ್ಕೆ ಪ್ರಾರಂಭ ಮಾಡುತ್ತೇವೆಂದು ಹೇಳುತ್ತಿದ್ದಾರೆ. ತಾವು 1996-97 ಮತ್ತು 1997-98ರವರೆಗೆ ತಾಲ್ಲೂಕುವಾರು ಹಣ ಬಿಡುಗಡೆ ಮಾಡಿದ ಬಗ್ಗೆ ಮಾಹಿತಿ ಕೊಟ್ಟಿದ್ದೀರಿ. ನಾನು ಕ್ಷೇತ್ರವಾರು ಎಷ್ಟು ಹಣ ಬಿಡುಗಡೆ ಮಾಡಿದ್ದೀರೆಂದು ಕೇಳಿದ್ದೇನೆ. ದಯವಿಟ್ಟು ಕ್ಷೇತ್ರವಾರು ಎಷ್ಟು ಹಣ ಬಿಡುಗಡೆ ಮಾಡಿದ್ದೀರೆಂದು ಹೇಳಬೇಕು. ಮನೆಗಳು ಏಕೆ ಅಪೂರ್ಣವಾಗಿ ಉಳಿದಿವೆ? ಆಶ್ರಯ ಮನೆಗಳನ್ನು ಏನು ಕಟ್ಟಿದ್ದೀರಿ ಅವಕ್ಕೆ ವಿದ್ಯುತ್ ಸಂಪರ್ಕ ಮತ್ತು ನೀರಿನ ವ್ಯವಸ್ಥೆಯನ್ನು ಯಾವ ರೀತಿ ಮಾಡುತ್ತೀರೆಂದು ಹೇಳಬೇಕು.

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಸದಸ್ಯರು 1995-96, 1996-97 ಮತ್ತು 1997-98ರಲ್ಲಿ ಹಣ ಬಿಡುಗಡೆ ಆಗಿಲ್ಲವೆಂದು ಹೇಳಿದ್ದಾರೆ. 1995 ರಿಂದ 1998ರವರೆಗೆ ಕ್ಷೇತವಾರು ಮಾಹಿತಿಯನ್ನು ಕೇಳಿದ್ದಾರೆ. ನಿಮ್ಮ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ 1995-96ರಲ್ಲಿ 30,00,550 ರೂಪಾಯಿಗಳನ್ನು, 1996-97ರಲ್ಲಿ 76,00,346 ರೂಪಾಯಿಗಳನ್ನು ಹಾಗು 1997-98ರಲ್ಲಿ 67,00,069 ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ. ಅದಲ್ಲದೆ, ನಾವು ವಿದ್ಯುತ್ತನ್ನು ನಮ್ಮ ಜನತಾ ಮನೆಗಳಿಗೆ ಒದಗಿಸುವುದಕ್ಕೆ ಅವಕಾಶ ಇಲ್ಲ. ಭಾಗ್ಯಜ್ಯೋತಿ ಯೋಜನೆಯಲ್ಲಿ ಏನಾದರೂ ನಾವು ಮಾಡಿಸಬೇಕಾಗುತ್ತದೆಂದು ಮಾನ್ಯ ಸದಸ್ಯರಿಗೆ ಹೇಳುತ್ತೇನೆ.

ಶ್ರೀ ಪ್ರಕಾಶ್ ಬಿ.ಹುಕ್ಕೇರಿ: ತಾಲ್ಲೂಕುವಾರು ಮತ್ತು ಕ್ಷೇತ್ರವಾರು ಮಾಹಿತಿ ಬಗ್ಗೆ ನಾನು ಬೆಳಗಿನಿಂದ ಫೋನ್ ಮಾಡಿ ಅಧಿಕಾರಿಗಳನ್ನು ಕೇಳಿದೆ. ನೀವು ಕ್ಷೇತ್ರವಾರು ಮಾಹಿತಿ ಕೊಟ್ಟಿದ್ದೀರಾ ಅಥವಾ ತಾಲ್ಲೂಕುವಾರು ಮಾಹಿತಿ ಕೊಟ್ಟಿದ್ದೀರಾ ಎಂದು ಕೇಳಿದೆ. ಅವರು ಏನು ಹೇಳಿದರೆಂದರೆ, ನಾವು ಕ್ಷೇತ್ರವಾರು ಮಾಹಿತಿ ಕೊಟ್ಟಿಲ್ಲವೆಂದು ಹೇಳಿದರು. ಚಿಕ್ಕೋಡಿ ತಾಲ್ಲೂಕಿನಲ್ಲಿ ಚಿಕ್ಕೋಡಿ, ಸದಲಗಾ ಮತ್ತು ನಿಪ್ಪಾಣಿ ಎಂದು 3 ಕ್ಷೇತ್ರಗಳು ಬರುತ್ತವೆ, ಆದ್ದರಿಂದ ನಾವು ತಾಲ್ಲೂಕುವಾರು ಮಾಹಿತಿ ಕೊಟ್ಟಿದ್ದೇವೆಂದೂ, ಕ್ಷೇತ್ರವಾರು ಮಾಹಿತಿ ಕೊಟ್ಟಿಲ್ಲವೆಂದು ಹೇಳಿದರು. ನಾನು ನಿಮ್ಮನ್ನು ಮತ್ತೊಂದು ಪ್ರಶ್ನೆ ಕೇಳಿದ್ದೆ. 1995ರಿಂದ ಮನೆಗಳು ಅಪೂರ್ಣವಾಗಿ ಉಳಿದಿವೆ. ಸಮಿತಿಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಿದ್ದಾರೆ. 1995ರಲ್ಲಿ 48 ಮನೆಗಳು ಅಪೂರ್ಣವಾಗಿ ಉಳಿದಿವೆ, 1996ರಲ್ಲಿ 18 ಮನೆಗಳು ಅಪೂರ್ಣವಾಗಿವೆ ಮತ್ತು 1997ರಲ್ಲಿ ಒಂದು ಮನೆಯನ್ನೂ ಕಟ್ಟಿಲ್ಲ. ಏತಕ್ಕೆ ಒಂದೂ ಮನೆಯನ್ನು ಕಟ್ಟಿಲ್ಲವೆಂದು ಕೇಳುತ್ತೇನೆ, ಸ್ಪಷ್ಟವಾದ ಉತ್ತರ ಹೇಳಿ.

ಶ್ರೀ ಹೆಚ್.ಡಿ.ರೇವಣ್ಣ: ಒಂದೂ ಮನೆ ಕಟ್ಟಿಲ್ಲವೆಂದು ತಾವು ಹೇಳುತ್ತಿದ್ದೀರಿ. ಆದರೆ ತಮಗೆ, ಆಶ್ರಯ ಸಮಿತಿಗೆ ಪೂರ್ಣ ಅಧಿಕಾರ ಕೊಟ್ಟಿದ್ದೇವೆ. ತಾವು ಮನೆ ಕಟ್ಟಿಸುವುದು ಇರಬಹುದು ಅಥವಾ ಮನೆ ಕಟ್ಟಲಿಕ್ಕೆ ಅವರಿಗೆ ಅಧಿಕಾರ ಕೊಟ್ಟಿರಬಹುದು; ಆದರೆ ಇವತ್ತು ಹೊಸದಾಗಿ ಏನೂ ಕೊಟ್ಟಿಲ್ಲ. ಅದು ಹಿಂದಿನ

ಆದೇಶದಲ್ಲಿ ಇದೆ. ನೋಡುವುದು, ಮಾಡುವುದು ಅವರಿಗೆ ಸೇರಿದುದ್ದು. ಅದರಲ್ಲಿ ಏನಾದರೂ ಆಗಿಲ್ಲವೆಂದರೆ ತಾಲ್ಲೂಕು ಪಂಚಾಯಿತಿ ಸಮಿತಿಯ ಕಾರ್ಯದರ್ಶಿಗಳು ಮಾಡಿಲ್ಲವೆಂದರೆ ದೂರು ಕೂಡಿ. ಏತಕ್ಕೆ ಮಾಡಿಲ್ಲವೆಂದು ತನಿಖೆ ಮಾಡಿ ತಮಗೆ ಪೂರ್ಣ ಮಾಹಿತಿ ಕೊಡುತ್ತೇನೆ.

ಉಪಾಧ್ಯಕ್ಷರು: ಮಾನ್ಯ ಪಾಟೀಲರ ತಮ್ಮ ಪ್ರಶ್ನೆ: 1562ಕ್ಕೆ ಮಂತ್ರಿಗಳು ಸಮಯ ಕೇಳಿದ್ದಾರೆ.

ವಿಷಯ: ತಿಪಟೂರಿನಲ್ಲಿ ಬಸ್ ಡಿಪೋ ತೆರೆಯುವ ಕುರಿತು.

260 (1591)

ಶ್ರೀ ಬಿ.ನಂಜಾಮರಿ (ತಿಪಟೂರು): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆಯಲ್ಲಿ ಹೊಸದಾಗಿ ಬಸ್ ಡಿಪೋಗಳನ್ನು ತೆರೆಯುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ತಿಪಟೂರಿನಲ್ಲಿ ಬಸ್ ಡಿಪೋ ತೆಗೆಯಲು ಯಾವ ಕ್ರಮ ತೆಗೆದುಕೊಳ್ಳಲಾಗಿದೆ?

ಶ್ರೀ ಪಿ.ಜಿ.ಆರ್.ಸಿಂಧ್ಯ (ಸಾರಿಗೆ ಸಚಿವರು):

ಅ) ಹೌದು.

ಆ) ಸರ್ವೆ ಸಂಖ್ಯೆ 1ರಲ್ಲಿನ 12 ಎಕರೆ ಜಮೀನನ್ನು ಒದಗಿಸಲು ಸಣ್ಣ ನೀರಾವರಿ ಇಲಾಖೆಯನ್ನು ಕೋರಲಾಗಿದೆ. ಜಮೀನನ್ನು ಪಡೆದ ನಂತರ, ಅವಶ್ಯಕತೆ, ಸಾಧ್ಯತೆ ಮತ್ತು ಸಂಪನ್ಮೂಲಗಳ ಲಭ್ಯತೆಯಾನುಸಾರ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು.

ಶ್ರೀ ಬಿ.ನಂಜಾಮರಿ: ತುಮಕೂರು ಜಿಲ್ಲೆಯಲ್ಲಿ ಹೊಸದಾಗಿ ಬಸ್ ಡಿಪೋ ತೆರೆಯುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಅಂದರೆ ಹೌದು ಎಂದು ಹೇಳಿದ್ದಾರೆ. ಹಾಗಿದ್ದಲ್ಲಿ ತಿಪಟೂರು ಬಸ್ ಡಿಪೋ ತೆರಯಲು ಯಾವ ಕ್ರಮ ತೆಗೆದುಕೊಳ್ಳಲಾಗಿದೆ ಎಂದರೆ ಸರ್ವೆ ನಂ.1ರಲ್ಲಿ 12 ಎಕರೆ ಜಮೀನನ್ನು ಒದಗಿಸಲು ಸಣ್ಣ ನೀರಾವರಿ ಇಲಾಖೆಯನ್ನು ಕೋರಲಾಗಿದೆ ಎಂದು ಹೇಳಿದ್ದಾರೆ. ಅಲ್ಲದೆ ಜಮೀನು ಪಡೆದ ನಂತರ ಅವಶ್ಯಕತೆ, ಸಾಧ್ಯತೆ ಮತ್ತು ಸಂಪನ್ಮೂಲಗಳ ಲಭ್ಯತೆ ಮೇರೆಗೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಹೇಳಿದ್ದಾರೆ. ಆದರೆ ಈ ಪ್ರಶ್ನೆಯನ್ನು